ಶ್ರೀ ವಿ. ಎಲ್. ಪಾಟೀಲರು (ಕಂದಾಯ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ.—ರಾಜ್ಯದಲ್ಲಿ ವಿದ್ಯುತ್‌ಚಾಲಿತ ಪಂಪ್‌ಸೆಟ್ಟುಗಳು ಫೋಲ್ಟೇಜ್ ಇಲ್ಲದೆ ಕೆಲಸ ಮಾಡದಿರುವುದರ ಬಗ್ಗೆ.

ಪ್ರ. ೧೪ (೪೮) ಡಾ॥ ವಿ. ಎಸ್. ಆಚಾರ್ಯ (ಉಡುಪಿ).—ಮಾನ್ಯ ಆಬಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಅನೇಕ ಕಡೆ ವಿದ್ಯುತ್‌ಚಾಲಿತ ಪಂಪ್‌ಸೆಟ್ಟುಗಳು ಫೋಲ್ಟೇಜ್ ಇಲ್ಲದೆ ಕೆಲಸ ಮಾಡದಿರುವುದು ಹಾಗೂ ಸುಟ್ಟು ಹೋಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ, ಅದನ್ನು ಗಂಭೀರವಾಗಿ ಪರಿಗಣಿಸಿ ಅದ್ಯತೆಯ ಮೇಲೆ ಸರಿಪಡಿಸುವ ವ್ಯವಸ್ಥೆ ಏನಾದರೂ ಇದೆಯೆ?

ಶ್ರೀ ಜೆ. ಹೆಚ್. ಪಟೇಲ್ (ಆಬ್ಕಾರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು). —

ಅ) ಲೋ ವೋಲ್ಟೇಜ್‌ನಿಂದ ವಿದ್ಯುತ್ ಪಂಪುಸೆಟ್ಟುಗಳು ಸುಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಗಮನಕ್ಕೆ ಲೋ ವೋಲ್ಟೇಜ್ ಬಗ್ಗೆ ದೂರುಗಳು ಬಂದಿದ್ದುವು. ರಾಜ್ಯದ ಹಲವು ಕಡೆ ಕಮ್ಮಿ ವೋಲ್ಟೇಜ್ ಇರುವುದನ್ನು ಉತ್ತಮ ಪಡಿಸಲು ಮಂಡಳಿಯು ಹಲವು ಕಾರ್ಯಕ್ರಮಗಳನ್ನು ಕೈಗೊಂಡಿದೆ.

ಆ) ಮಂಡಳಿಯು ಈ ಬಗ್ಗೆ ಹಲವು ಕಾರ್ಯಗಳನ್ನು ನಿರೂಪಿಸಿದೆ.

ಗುಲ್ಬರ್ಗಾ ಜಿಲ್ಲೆಯಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯ ರಚನೆ.

ಪ್ರ. ೧೫ (೭೦) ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯು ಇದುವರೆಗೆ ಕೈಗೊಂಡ ಕೆಲಸಗಳಾವುವು;

ಆ) ೧೯೮೨-೮೩ರಲ್ಲಿ ಇಡೀ ಜಿಲ್ಲೆಯಲ್ಲಿ ಈ ಮಂಡಳಿಯು ಖರ್ಚು ಮಾಡಿದ ಹಣದ ವಿವರವೆಷ್ಟು;

ಇ) ಶಹಬಾದ್ ನಗರದ ಯಾವ ಯಾವ ಓಣಿಗಳನ್ನು ಯೋಜನೆಯಲ್ಲಿ ತೆಗೆದುಕೊಳ್ಳಲಾಗಿದೆ

ಈ) ಕೊಳಚೆ ನಿರ್ಮೂಲನೆಗಾಗಿ ಎಷ್ಟು ಹಣವನ್ನು ಶಹಬಾದಿನಲ್ಲಿ ಖರ್ಚು ಮಾಡಲಾಗಿದೆ

ಉ) ೧೯೮೩-೮೪ರಲ್ಲಿ ಈ ಬಗ್ಗೆ ಸರ್ಕಾರ ಶಹಬಾದಿನ ಕೊಳಚೆ ನಿರ್ಮೂಲನಾ ಕಾರ್ಯಕ್ರಮ ಇಟ್ಟುಕೊಂಡಿದೆಯೆ;

ಊ) ಹಾಗಿದ್ದಲ್ಲಿ ಈ ಕೆಲಸಕ್ಕಾಗಿ ಎಷ್ಟು ಹಣವನ್ನು ಸಿಗದಿಪಡಿಸಲಾಗಿದೆ.

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ೭ ಕೊಳಚೆ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮವನ್ನು ಮಂಡಳಿಯು ಇದುವರೆಗೆ ಕೈಗೊಂಡಿದೆ.

ಆ) ೧೯೮೨-೮೩ರ ಸಾಲಿನಲ್ಲಿ ಮಂಡಳಿಯು ೪.೧೮ ಲಕ್ಷ ರೂ.ಗಳನ್ನು ಖರ್ಚು ಮಾಡಿದೆ.